# ‘ಕೊಡುವ ಕೈಗಳಿವೆ, ಗುರಿ-ಶ್ರಮ ಇರಬೇಕಷ್ಟೇ’



‘ಎಲೆಕ್ಟ್ರಾನಿಕ್ಸ್, ಮೆಕಾನಿಕಲ್ ಮತ್ತು ಕಮ್ಯುನಿಕೇಷನ್ ಎಂಜಿನಿಯರಿಂಗ್ ಮಾತ್ರವಲ್ಲದೆ, ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದವರಿಗೂ ಬೇಡಿಕೆ ಇದೆ. ಆದರೆ, ಅದಕ್ಕೆ ತಕ್ಕ ಕೌಶಲಗಳನ್ನು ವಿದ್ಯಾರ್ಥಿಗಳು ಹೊಂದಬೇಕು’ ಎನ್ನುತ್ತಾರೆ ಮೈಸೂರಿನ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯ ಬಿ. ಸದಾಶಿವೇಗೌಡ.

‘ಮೊದಲು ಮೆಕಾನಿಕಲ್ ಎಂಜಿನಿಯರಿಂಗ್‌ಗೆ ಬೇಡಿಕೆ ಕಡಿಮೆ ಇತ್ತು. ಎಲೆಕ್ಟ್ರಾನಿಕ್ ವಾಹನಗಳ ಉತ್ಪಾದನೆ ಹೆಚ್ಚಾದಂತೆ ಈ ಮೆಕಾನಿಕಲ್ ಎಂಜಿನಿಯರಿಂಗ್ ಪದವೀಧರರು ಬೇಕಾಗಿದ್ದಾರೆ. ಜೊತೆಗೆ, ಸೆಮಿಕಂಡಕ್ಟರ್ ಕಂಪನಿಗಳು ಹೆಚ್ಚಾಗುತ್ತಿರುವುದರಿಂದ ಎಲೆಕ್ಟ್ರಿಕಲ್ ಓದಿದವರಿಗೂ ಬೇಡಿಕೆ ಇದೆ. ಎಐ ಬಳಕೆ ಜ್ಞಾನ ಹೊಂದಿರುವ ಸಿವಿಲ್ ಎಂಜಿನಿಯರ್‌ಗಳಿಗೂ ಸಾಕಷ್ಟು ಬೇಡಿಕೆ ಇದೆ’ ಎಂದು ಮಾಹಿತಿ ನೀಡಿದರು.

‘ನಾವು ಅನೇಕ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದೇವೆ. ಕೈಗಾರಿಕೆಗಳಲ್ಲಿನ ನಿಪುಣರೇ ನಮ್ಮ ಕಾಲೇಜಿಗೆ ಬಂದು ತರಬೇತಿ ನೀಡುತ್ತಾರೆ’ ಎಂದರು.

**ಪ್ರೊಫೆಸರ್ಸ್ ಆಫ್ ಪ್ರಾಕ್ಟೀಸ್:** ‘ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯು (AICTE) ‘ಪ್ರೊಫೆಸರ್ಸ್ ಆಫ್ ಪ್ರಾಕ್ಟೀಸ್’ ಎಂಬ ಕಾರ್ಯಕ್ರಮ ಪರಿಚಯಿಸಿದೆ. ಇದರನ್ವಯ, ಕೈಗಾರಿಕೆಗಳು ಅಥವಾ ಕಂಪನಿಗಳಲ್ಲಿರುವ ತಾಂತ್ರಿಕ ನಿಪುಣರು, ತಜ್ಞರು, ನಮ್ಮ ಕಾಲೇಜಿಗೆ

**ಕುಟುಂಬದ ಜವಾಬ್ದಾರಿಯ ಒತ್ತಡವು ಕಾಲೇಜು ಹಂತದ ವಿದ್ಯಾರ್ಥಿಗಳಲ್ಲಿ, ‘ಡಿಗ್ರಿ ಅಥವಾ ಡಬಲ್ ಡಿಗ್ರಿ ಓದುವುದಕ್ಕಿಂತ ಕೆಲಸಕ್ಕೆ ಹೋಗಿ ಮನೆಯವರ ಹೊರೆ ಕಡಿಮೆ ಮಾಡಬೇಕು’ ಎಂಬ ಮನೋಭಾವವೇ ಹೆಚ್ಚು ಬಲ ಪಡೆಯುತ್ತದೆ. ಆದರಲ್ಲಿಯೂ, ಅನೇಕ ಕುಟುಂಬಗಳಲ್ಲಿ ಹಿರಿಯ ಮಗ ಅಥವಾ ಮಗಳ ಮೇಲೆಯೇ ಇಂತಹ ಆರ್ಥಿಕ ಒತ್ತಡಗಳು ಹೆಚ್ಚುತ್ತಿರುವುದು ಸಾಮಾನ್ಯವಾಗಿದೆ.**




### ಗಿಗ್ ಎಕಾನಮಿ ಪ್ರಭಾವ

ಅನೇಕ ವಿದ್ಯಾರ್ಥಿಗಳು ಮತ್ತು ಯುವಕರ ಕುಟುಂಬದ ಆರ್ಥಿಕ ಸ್ಥಿತಿ ದುರ್ಬಲ ಆಗಿರುವುದರಿಂದ ಬಹುತೇಕರಿಗೆ ತಕ್ಷಣದ ಆದಾಯದ ಅವಶ್ಯಕತೆ ಇರುತ್ತದೆ. ‘ಗಿಗ್ ಎಕಾನಮಿ’ ಇಂಥ ಯುವಸಮೂಹಕ್ಕೊಂದು ವರದಾನವಾಗಿದೆ. ಫುಡ್ ಡೆಲಿವರಿ ಕೆಲಸವು ತಕ್ಷಣಕ್ಕೆ ಸಿಗುತ್ತಿರುವುದರಿಂದ ಮತ್ತು ತಕ್ಷಣವೇ ಆದಾಯವೂ ಸಿಗುತ್ತಿರುವುದರಿಂದ, ಓದು ಮುಂದುವರಿಸಲಾಗದವರು ಈ ಕ್ಷೇತ್ರದತ್ತ ಹೊರಳುತ್ತಿದ್ದಾರೆ. ಡ್ರೈವಿಂಗ್ ಲೈಸೆನ್ಸ್ ಮತ್ತು ಸ್ಮಾರ್ಟ್‌ಫೋನ್ ಇದ್ದರೂ ಸಾಕು ಈ ಕೆಲಸ ಮಾಡಬಹುದು.

ಪದವಿ ಪೂರೈಸಿದ್ದರೂ ಬಯಸಿದ ಉದ್ಯೋಗ ಸಿಗದಿರುವುದು ಹಾಗೂ ಸರ್ಕಾರಿ ಮತ್ತು ಖಾಸಗಿ ಕಂಪನಿಗಳಲ್ಲಿ ಭಾರೀ ಸ್ಪರ್ಧೆ ಇರುವ ಕಾರಣದಿಂದಲೂ, ಉನ್ನತ ಶಿಕ್ಷಣಕ್ಕೆ ತೆರಳುವ ಬದಲಿಗೆ ಗಿಗ್ ಎಕಾನಮಿ ಅಡಿ ಬರುವ ಇಂತಹ ಉದ್ಯೋಗದತ್ತ ಯುವಕರು ಹೊರಳುವುದು ಹೆಚ್ಚುತ್ತಿದೆ. ಗಿಗ್ ಕೆಲಸಗಾರರ ಕುರಿತು ರಾಜ್ಯ ಸರ್ಕಾರವೂ ಉತ್ತಮ ಕಾನೂನು ತರಲು ಮುಂದಾಗಿರುವುದು ಹಾಗೂ ಇದೊಂದು ಗೌರವಯುತ ಕೆಲಸ ಎಂಬ ಮನೋಭಾವ ಸಮಾಜದಲ್ಲಿ ಬೆಳೆದಿರುವುದೂ ಇದಕ್ಕೆ ಕಾರಣವಿರಬಹುದು.

### ಸಾಂಪ್ರದಾಯಿಕ ಪದವಿ V/S ಹೊಸ ಕೋರ್ಸ್‌ಗಳು

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಉದ್ಯೋಗ ಮಾರುಕಟ್ಟೆಯ ಸ್ವರೂಪ. ಮೊದಲೇ ಹೇಳಿದಂತೆ, ಪದವಿ ಪಡೆದರೂ ಕೆಲಸ ಸಿಗುತ್ತದೆಯೇ ಎಂಬ ದೊಡ್ಡ ಪ್ರಶ್ನೆ ಯುವಸಮೂಹದ ಮುಂದಿದೆ. ಅದರಲ್ಲಿಯೂ, ಕೆಲವು ಸಾಂಪ್ರದಾಯಿಕ ಪದವಿಗಳು ಇಂದಿನ ಪರಿಸ್ಥಿತಿಯಲ್ಲಿ ಮಹತ್ವ ಕಳೆದುಕೊಂಡಿವೆ. ಬಿ.ಎ., ಬಿ.ಕಾಂ, ಎಂ.ಎ.. ಹೀಗೆ ತಲೆಮಾರುಗಳಿಂದ ಪ್ರಚಲಿತವಾಗಿದ್ದ ಕೋರ್ಸ್‌ಗಳಲ್ಲಿ ಹಲವು ಉದ್ಯೋಗ ಸೃಷ್ಟಿಸಲು ವಿಫಲವಾಗುತ್ತಿವೆ. ಜೊತೆಗೆ, ಲೈಬ್ರರಿ ಸೈನ್ಸ್, ಐಟಿಐನಂತಹ ಸಾಂಪ್ರದಾಯಿಕ ಡಿಪ್ಲೊಮಾ ಕೋರ್ಸ್‌ಗಳಿಗೆ ಬೇಡಿಕೆ ಕಡಿಮೆಯಾಗಿದೆ.

ಆದರೆ, ಕಂಪ್ಯೂಟರ್ ಸೈನ್ಸ್, AI, ಡೇಟಾ ಸೈನ್ಸ್,